MVC.No.198/2024
PW.1

ದಿನಾಂಕ**: 28.03.2025** ರಂದು ಸಾಕ್ಷಿಯನ್ನು ಮುಖ್ಯ ವಿಚಾರಣೆಗಾಗಿ ಕರೆಯಿಸಿ**,** ಪ್ರಮಾಣ ವಚನ ಬೋಧಿಸಲಾಯಿತು**.**

<u>ಮುಂದುವರೆದ ಮುಖ್ಯ ವಿಚಾರಣೆ</u>**:** ಅರ್ಜಿದಾರರ ಪರ**:** ಶ್ರೀ**.R.B.M.** ವಕೀಲರಿಂದ**.**

ನಾನು ನನ್ನ ಸಾಕ್ಷಿ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿ ಹಾಗೂ ಸಂಗತಿ ನನಗೆ ತಿಳಿದ ಮಟ್ಟಿಗೆ ನಿಜ ಇರುತ್ತದೆ ಮತ್ತು ಸಹಿ ನನ್ನದೆ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ.

ಹುಮನಾಬಾದ ಸಂಚಾರಿ ಪೋ.ಠಾ.ಕ್ರೈ.ನಂ.125/2023 ರಲ್ಲಿ ದಾಖಲಾದ ಪ್ರ.ವ.ವರದಿ, ದೂರು, ನನ್ನ ಹೇಳಿಕೆ, ಸ್ಥಳ ಪಂಚನಾಮೆ, ವಾಹನ ಜಪ್ತಿ ಪಂಚನಾಮೆ, ನನ್ನ ಗಾಯದ ಪ್ರಮಾಣ ಪತ್ರ, ವಾಹನ ತಪಾಸಣಾ ವರದಿ, ಅಂತಿಮ ವರದಿ, ಸಿ.ಸಿ.ನಂ.10/2024 ರಲ್ಲಿನ ರೋಜನಾಮೆಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 9 ಎಂದು, ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ10 ಎಂದು, ಮನ್ನೂರ್ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ ಸಮರಿ ಮತ್ತು ಬಿಲ್ಲನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.11 ಮತ್ತು 12 ಎಂದು, ಒಟ್ಟು 84 ವೈದ್ಯಕೀಯ, ಔಷಧಿಯ, ರೇಡಿಯಾಲೊಜಿ ಮತ್ತು ಪೆಥಾಲೊಜಿ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.13 ಎಂದು, ಮನ್ನೂರ್ ಆಸ್ಪತ್ರೆಯವರ ಮೆಡಿಸಿನ ಬುಕ್ ಮತ್ತು ವೈದ್ಯರ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.14 ಎಂದು, ಪ್ರಯೋಗಾಲಯದ ಮತ್ತು ರೇಡಿಯಾಲೊಜಿ ವರದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.15 ಎಂದು, ಒಟ್ಟು 3 ಎಕ್ಸರೇಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.16 ಎಂದು ಗುರುತಿಸಲಾಯಿತು. ಸೋಮೇಶ್ವರ ಇವರ ವಾಹನ ಚಾಲನಾ ಪರವಾನಿಗೆ, ವಾಹನ ಸಂ.ಜಿಜೆ-02/ಎಕ್ಸ ಎಕ್ಸ-5159 ನೇದ್ದರ ಆರ್. ಸಿ ಕಾಪಿ ಹಾಗೂ ವಿಮಾ ಪಾಲಿಸಿಯ ಅಟೆಸ್ಟೆಡ್ ಕಾಪಿಗಳನ್ನು ಹಾಜರುಪಡಿಸಿರುತ್ತೇನೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(**ಪಾಟೀ ಸವಾಲಿಗಾಗಿ ಸಮಯಾಕಾಶ ಕೇಳಿದ್ದು**,** ಸಮಯಾವಕಾಶ ನೀಡಿ ಮುಂದೂಡಲಾಯಿತು**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-